International Journal of Kannada Research
www.kannadajournal.com

ISSN: 2454–5813
IJKR 2022; 8(1): 46-49
© 2022 IJKR
www.kannadajournal.com
Received: 28-11-2021
Accepted: 30-12-2021

**Suneetha BV**
Assistant Professor,
Department of Kannada,
Bengaluru City University
Bengaluru, Karnataka
India

**Corresponding Author:**
**Suneetha BV**
Assistant Professor,
Department of Kannada,
Bengaluru City University
Bengaluru, Karnataka
India

# ವೀರಶೈವ ಪರಂಪರೆಯಲ್ಲಿ ಮಹಿಳಾ ಪ್ರತಿನಿಧೀಕರಣ

**Suneetha BV**

**ಸಾರಲೇಖ**
ಕನ್ನಡ ನೆಲದಲ್ಲಿ ವೈದಿಕ ಮತ ತತ್ವಗಳಿಗೆ ಎದುಗೊಂಡು ಪ್ರತಿರೋದ ಒಡ್ಡಿದ 12ನೇ ಶತಮಾನದ ಶರಣರು ತಮ್ಮ ಅನುಭವ ಮಂಟಪದಲ್ಲಿ ಮಹಿಳೆಯರೊಂದಿಗೆ ಸಮಾನವಾಗಿ ವೇದಿಕೆ ಹಂಚಿಕೊಂಡರು. ಇದ ಕಾರಣ ಚರಿತ್ರೆಯಲ್ಲಿ ಮೊದಲಬಾರಿಗೆ ಮಹಿಳೆ ತನ್ನಗೆ ಸಿಕ್ಕ ಅವಕಾಶದಿಂದ ಸಾಮಾಜಿಕ ಧಾರ್ಮಿಕ ಸ್ವತಂತ್ರ ಹಾಗೂ ಅಭಿವ್ಯಕ್ತಿಯ ರೂಪದಲ್ಲಿ ವಚನಗಳ ಮೂಲಕ ಮಾತಾಡಿದಳು. ಇಂತಹ ಅಪರೂಪದ ಅಭಿವ್ಯಕ್ತಿಯಲ್ಲಿ ಅವಳ ಅನುಭವ ಲೋಕವು ಮೊದಲಿಗೆ ಹೊಸದಾಗಿ ಅನಾವರಣಗೊಂಡಿತು. ಹೆಣ್ಣಿನ ಸಾರ್ವತ್ರಿಕತೆ ತೋರಿಸುವ ‘ಜಗವೆಲ್ಲಾ ಹೆಣ್ಣು ನೋಡಾ’ ಎಂಬ ಅಕ್ಕನ ನಡೆನುಡಿ, ಅನುಭವ ಮಂಟಪದ ನೆಲೆ ಬೆಲೆ ಇನ್ನಷ್ಟು ಎತ್ತರಕ್ಕೆ ಏರಿಸಿತು. ವಚನಕಾರ್ತಿಯರು ನಿರೂಪಿದ ವೈಜ್ಞಾನಿಕ ದೃಷ್ಟಿಕೋನ, ಲಿಂಗತಾರತ್ಯ ವಿಚಾರಗಳು, ಆಧ್ಯಾತ್ಮಿಕ ನೆಲೆಯ ಲಿಂಗಾಂಗ ಸಾಮರಸ್ಯ, ಸಾಮಾಜಿಕ ನೆಲೆಯ ಸಮಾನತೆಯು ಬಹು ಮುಖ್ಯವಾದ ಮಹಿಳಾಪರ ಕಾಳಜಿಗಳಾಗಿವೆ. ಈ ಕಾಲದ ವಚನಕಾರ್ತಿಯರಲ್ಲಿ ಮೊದಲ ಸ್ಥಾನ ಅಕ್ಕಮಹಾದೇವಿಗೆ ಮೀಸಲಾದರೆ ನಂತರದ ಪ್ರಮುಖರು ಗಂಗಾಬಿಕೆ, ನೀಲಾಂಬಿಕೆ, ಆಯ್ದಕ್ಕಿ ಲಕ್ಕಮ್ಮ, ಗೊಗ್ಗವ್ವೆ, ಕದಿರೆ ರೆಮ್ಮವ್ವ, ಕಾಳವ್ವೆ, ಕೊಟ್ಟಣದ ಸೊಮವ್ವೆ, ಸೂಳೆ ಸಂಕವ್ವ, ಸತ್ಯಕ್ಕ ಮುಂತಾದವರು.

**ಪ್ರಮುಖ ಪದಗಳು:** ಸಾಹಿತ್ಯ ಅಭಿವ್ಯಕ್ತಿ, ಧಾರ್ಮಿಕ, ಮಹಿಳೆ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ವೀರಶೈವ, ವೈದಿಕ

**ಪೀಠಿಕೆ:**
ಪುರಷರನ್ನು ಅವಲಂಬಿಸಿಯೇ ಬದುಕಬೇಕಾಗಿದ್ದ ಮಹಿಳೆಯರು ಶಿವಭಕ್ತೆಯರಾಗಿ ಪತ್ನಿಯೊಂದಿಗೆ ಸಾಂಸಾರಿಕ ಬದುಕಿನ ಮೂಲಕವೂ ಮೋಕ್ಷಸಾಧನೆ ಮಾಡುವ ಶರಣರ ಸಂದರ್ಭದಲ್ಲಿ ಅವಕಾಶವಿತ್ತು. ಆದ ಕಾರಣ ಪಾರಮಾರ್ಥಿಕ ಮತ್ತು ಧಾರ್ಮಿಕ ನೆಲೆಗಳಲ್ಲಿ ಮಹಿಳೆಯರ ಬದುಕಿನಲ್ಲಿ ಈ ಅವಕಾಶಗಳು ಹೆಚ್ಚಾಗಿಯೇ ದೊರೆಯಿತು. ಕೆಲವರು ‘ತತ್ವದ ಮಾತು ನಮಗೇತಕಯ್ಯ’ ಎಂದು ಆಚಾರ ಶುದ್ಧಿಯಲ್ಲಿ ಬದುಕಿದರು. ವೃತ್ತಿ ಅವಲಂಬಿತ ಜಾತಿ ನಿರ್ಣಯದ ಸಂಕುಚ ಮನೋಭಾವದಿಂದ ಹೊರಬಂದು ‘ಆವ ಕಾಯಕವ ಮಾಡಿದರೂ ಒಂದೆ ಕಾಯಕವಯ್ಯ’ ಎಂದು ಕಾಯಕತತ್ವದ ಸತ್ಯಶುದ್ಧತೆಯನ್ನು ಎತ್ತಿಹಿಡಿದರು. ಧಾರ್ಮಿಕ ವಿಚಾಗಳಿಗಿಂತ ಸಾಮಾಜಿಕ ಸಂಗತಿಗಳನ್ನು ಪ್ರಸ್ತಾಪಿಸುವ ವಚನಕಾರ್ತಿಯರು ಆಸಕ್ತಿಯಿಂದಲೇ ಕೆಲವರು ಸಮಾಜ ಸುಧಾರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸಮಾಜದ ವಿಷಮತೆಯನ್ನು ನೇರವಾಗಿ ಪ್ರಶ್ನಿಸುವಂತೆ ವೈಯಕ್ತಿಕವಾಗಿ ಆಚರಿಸಿ ತೋರಿಸಿದರು. ತಮಗೆ ಸಿಕ್ಕ ಅಭಿವ್ಯಕ್ತಿ ಸ್ವಾತಂತ್ರವನ್ನು ಪಡೆದು ಮುಕ್ತವಾಗಿ ಮಾತಾಡಿದರು ಅಲ್ಲದೆ, ಕ್ರಿಯಾತ್ಮಕವಾಗಿ ಅಂದಿನ ಆಂದೋಲನದ ಭಾಗವಾದರು.
ಸಾಮಾಜಿಕ ವ್ಯವಸ್ಥೆಯೊಂದರ ಅಸಮಾನತೆಯ ಪರಿಣಾಮದಿಂದ ರೂಪಗೊಂಡ 12ನೇ ಶತಮಾನದ ವೀರಶೈವ ಭಕ್ತಿ ಚಳುವಳಿ, ಧಾರ್ಮಿಕವಾಗಿ ಸಾಮಾಜಿಕವಾಗಿ ಆಗಿನ ಸಮಾಜದಲ್ಲಿ ಕ್ರಾಂತಿಯನ್ನೇ ರೂಪಿಸಿದೆ. ಮಹಿಳೆ ಮೋಕ್ಷಕ್ಕೆ ಅರ್ಹಳಲ್ಲವೆಂದು ಕಡೆಗಣಿಸಿಕೊಂಡು ಬಂದಿದ್ದು ಆ ಸಂದರ್ಭದ ವೈದಿಕ ಹಾಗೂ ಜೈನ್ಯ ಧರ್ಮಗಳ ಮುಖ್ಯ ವಿಚಾರವಾಗಿತ್ತು. ಬಹುಪಾಲು ಸಾಮಾಜಿಕ ವ್ಯವಸ್ಥೆಯಲ್ಲಿ ಅವಳ ಸ್ಥಾನ ಶೂನ್ಯವೇ ಆಗಿದ್ದ ಕಾಲ. ಇಂತಹ ಸನ್ನಿವೇಶದಲ್ಲಿ ವೀರಶೈವ ಧರ್ಮವು ವೈದಿಕ ಧರ್ಮಕ್ಕೆ ಪರ್ಯಾಯವಾಗಿ ಸಾಮಾಜಿಕ ಹಾಗೂ ಧಾರ್ಮಿಕವಾದ ಹೊಸ ಆಶಯಗಳೊಂದಿಗೆ ಹೊಸ ಸಿದ್ಧಾಂತವನ್ನು ರೂಢಿಸಿಕೊಂಡು ಹೊಸ ವ್ಯವಸ್ಥೆಯನ್ನು ರೂಪಿಸಲು ಮುಂದಾಯಿತು.

ವ್ಯಕ್ತಿಯ ವೈಯಕ್ತಿಕತೆಗೆ ಪ್ರಾಧಾನ್ಯತೆ ನೀಡಿ ಸ್ತ್ರೀ–ಪುರುಷರ ನಡುವಿನ ತರತಮ ಭಾವವನ್ನು, ಪುರುಷನ ಅಧೀನತೆಯನ್ನು ಖಂಡಿಸಿತು. ಇದು ತನ್ನ ಪ್ರತ್ಯೇಕ ಅಸ್ತಿತ್ವಕ್ಕೆ ರೂಪಿಸಿಕೊಂಡ ವ್ಯವಸ್ಥೆಯಾಗಿ ಪ್ರಧಾನವಾಗಿ ಆಚರಣೆಯಲ್ಲಿದ್ದ ವೈದಿಕ ಧರ್ಮದ ಸಿದ್ಧಾಂತಗಳ ಹಾಗೂ ಆಚರಣೆಗಳಿಗೆ ಸಮಾನಾಂತರವಾಗಿದ್ದವು. ವಚನಕಾರರು ರೂಪಿಸಿಕೊಂಡಿದ್ದ ಸಾಮಾಜಿಕ ಹಾಗೂ ಧಾರ್ಮಿಕ ವಿನ್ಯಾಸಗಳು ಮಹಿಳೆಯ ಅಂತಸ್ತು ಹಾಗೂ ಅವರ ಬದುಕಿಗೆ ಹೊಸ ಚಾಲನೆಯನ್ನು ನೀಡಿತು. ಸಂಸಾರದ ಬಗ್ಗೆ ಮಹಿಳೆಯ ಬಗ್ಗೆ ವಚನಕಾರರು ತಳೆದ ಸಾಮಾಜಿಕ ಹಾಗೂ ಧಾರ್ಮಿಕವಾದ ಗುಣಾತ್ಮಕ ಧೋರಣೆ ಹಾಗೂ ಅವುಗಳ ಅನುಷ್ಠಾನಕ್ಕಾಗಿ ಹೋರಾಡಿದ್ದರಿಂದಾಗಿ ವೀರಶೈವ ಭಕ್ತಿ ಪಂಥ ಚಳುವಳಿಯ ರೂಪ ಪಡೆಯಿತು.

ವೀರಶೈವ ಚಳುವಳಿಯು ವಚನ ಸಾಹಿತ್ಯದ ಮೂಲಕ ಜೀವಪರವಾದ ಮಾನವೀಯ ಮೌಲ್ಯಗಳು, ಆಧ್ಯಾತ್ಮಿಕ ಹಾಗೂ ಸಾಮಾಜಿಕ ತತ್ವಗಳಲ್ಲಿ ಹೆಣ್ಣು ಗಂಡಿನ ಸಮಾನತೆ ವ್ಯಕ್ತವಾಗಿದೆ. ವಚನಕಾರರು ಹೆಣ್ಣು–ಗಂಡು ತಾರತಮ್ಯಗಳನ್ನು ಅಂತರಂಗದಿಂದಲೇ ಅಳಿಸಿ ಮಹಿಳಾ ಕಾಳಜಿ ವ್ಯಕ್ತಪಡಿಸಿದರು. ಅವರ ಈ ವೈಚಾರಿಕ ದೃಷ್ಟಿಕೋನ ಜಾತಿಭೇದ ಲಿಂಗಭೇದವಿಲ್ಲದೆ ವಿವಿಧ ಸಾಮಾಜಿಕ ಹಿನ್ನೆಲೆ ಹಾಗೂ ವಿವಿಧ ಜಾತಿಗಳಿಂದ ಬಂದ ಹಲವು ವಚನಕಾರ್ತಿಯರು ವಚನ ಸಾಹಿತ್ಯದಲ್ಲಿ ತೊಡಗಿಸಿಕೊಂಡರು.

ಕನ್ನಡ ನೆಲದಲ್ಲಿ ವೈದಿಕ ಮತ ತತ್ವಗಳಿಗೆ ಎದುಗೊಂಡು ಪ್ರತಿರೋದ ಒಡ್ಡಿದ 12ನೇ ಶತಮಾನದ ಶರಣರು ತಮ್ಮ ಅನುಭವ ಮಂಟಪದಲ್ಲಿ ಮಹಿಳೆಯರೊಂದಿಗೆ ಸಮಾನವಾಗಿ ವೇದಿಕೆ ಹಂಚಿಕೊಂಡರು. ಚರಿತ್ರೆಯಲ್ಲಿ ಮೊದಲಬಾರಿಗೆ ಮಹಿಳೆಗೆ ಸಿಕ್ಕ ಸಾಮಾಜಿಕ ಧಾರ್ಮಿಕ ಸ್ವತಂತ್ರ ಹಾಗೂ ಅಭಿವ್ಯಕ್ತಿಯ ಅವಕಾಶಗಳಿಂದ ಆಕೆ ವಚನ ರೂಪದಲ್ಲಿ ಮಾತಾಡಿದಳು. ಅವರ ಮಾತುಗಳಲ್ಲಿನ ವಿಚಾರಗಳು ಅವಳ ಅನುಭವ ಲೋಕವನ್ನು ಹೊಸದಾಗಿ ಅನಾವರಣಗೊಂಡಿತು. ಹೆಣ್ಣಿನ ಸಾರ್ವತ್ರಿಕತೆ ತೋರಿಸುವ 'ಜಗವೆಲ್ಲಾ ಹೆಣ್ಣು ನೋಡಾ' ಎಂಬ ಅಕ್ಕನ ನಡೆನುಡಿ, ಅನುಭವ ಮಂಟಪದ ನೆಲೆ ಬೆಲೆ ಇನ್ನಷ್ಟು ಎತ್ತರಕ್ಕೆ ಏರಿಸಿತು. ವಚನಕಾರ್ತಿಯರು ನಿರೂಪಿದ ವೈಜ್ಞಾನಿಕ ದೃಷ್ಟಿಕೋನ, ಲಿಂಗತಾರತ್ಯ ವಿಚಾರಗಳು, ಆಧ್ಯಾತ್ಮಿಕ ನೆಲೆಯ ಲಿಂಗಾಂಗ ಸಾಮರಸ್ಯ, ಸಾಮಾಜಿಕ ನೆಲೆಯ ಸಮಾನತೆಯು ಬಹು ಮುಖ್ಯವಾದ ಮಹಿಳಾಪರ ಕಾಳಜಿಗಳಾಗಿವೆ. ಈ ಕಾಲದ ವಚನಕಾರ್ತಿಯರಲ್ಲಿ ಮೊದಲ ಸ್ಥಾನ ಅಕ್ಕಮಹಾದೇವಿಗೆ ಮೀಸಲಾದರೆ ನಂತರದ ಪ್ರಮುಖರು ಗಂಗಾಬಿಕೆ, ನೀಲಾಂಬಿಕೆ, ಆಯ್ದಕ್ಕಿ ಲಕ್ಕಮ್ಮ, ಗೊಗ್ಗವ್ವೆ, ಕದಿರೆ ರೆಮ್ಮವ್ವ, ಕಾಳವ್ವೆ, ಕೊಟ್ಟಣದ ಸೊಮವ್ವೆ, ಸೂಳೆ ಸಂಕವ್ವ, ಸತ್ಯಕ್ಕ ಮುಂತಾದವರು.

ವಚನಕಾರ್ತಿಯರಿಗೂ ಮುನ್ನ ಕನ್ನಡ ಮಹಿಳಾ ಶಿಷ್ಟ ಸಾಹಿತ್ಯ ಪರಂಪರೆಯಲ್ಲಿ ಅವೈದಿಕ ಧರ್ಮವಾದ ಜೈನ ಧರ್ಮ ಪ್ರಭಾವದಿಂದ ಮೊದಲು ಸಾಹಿತ್ಯರಚನೆ ಮಾಡಿದಳೆಂದು ಕಂತಿ ಹೆಸರು ಪ್ರಸ್ತಾಪವಾಗುತ್ತದೆ. ಹನ್ನೊಂದನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ನಾಗಚಂದ್ರ ಕವಿಯ ಸಮಕಾಲೀನ ಕವಿಯತ್ರಿ ಕಂತಿಯ ಪ್ರಸ್ತಾಪ ಪ್ರಾಚೀನ ಕನ್ನಡ ಕೃತಿಗಳಲ್ಲಿ ದೊರೆಯುತ್ತದೆ. ಅಭಿನವ ಪಂಪ ನಾಗಚಂದ್ರ ಕವಿಯೊಂದಿಗೆ ಕಾವ್ಯ ಪ್ರಸಂಗವನ್ನು ನಡೆಸಿ, ಸಮಸ್ಯೆಗಳನ್ನು ಪೂರ್ಣಗೊಳಿಸಿದಳೆನ್ನಲಾಗುವ ಕವಯತ್ರಿಯ ಕಾವ್ಯ ಪ್ರತಿಭೆಗೆ ಉದಾಹರಣೆಯೆನಿಸಿರುವ 'ಕಂತಿ ಹಂಪನ ಸಮಸ್ಯೆಗಳು' ಶೀರ್ಷಿಕೆಯ ಪದ್ಯಗಳು ದೊರಕಿವೆ. ಆದರೆ, ತನ್ನ ಸಮಕಾಲೀನ ಕವಯತ್ರಿಯನ್ನು ಕುರಿತು ನಾಗಚಂದ್ರ ಮೌನವಾಗಿರುವುದು ಮತ್ತು ಕಂತಿಯ ನಂತರದ ನಾಲ್ಕು ಶತಮಾನದವರೆಗೆ ಯಾವ ಕನ್ನಡ ಕಾವ್ಯದದಲ್ಲಿಯೂ ಕಂತಿಯ ಪ್ರಸ್ತಾಪವಿಲ್ಲದಿರುವುದು ಕಂತಿಯ ಚಾರಿತ್ರಿಕತೆಯ ನಿರ್ಣಯದಲ್ಲಿ ದೊಡ್ಡ ತೊಡಕುಗಳಾಗಿವೆ.

12ನೇ ಶತಮಾನದಲ್ಲಿ ವೈದಿಕ ಪರಂಪರೆಯ ಆಚರಣೆಗಳಲ್ಲಿದ್ದ ವಿರೋಧಾಭಾಸಗಳು ಹಾಗೂ ಅಸಮಾನತೆಗಳನ್ನು ವಿರೋಧಿಸಿ ರೂಪಗೊಂಡ ವೀರಶೈವ ವಚನ ಚಳುವಳಿಯು ಗಂಡು ಹೆಣ್ಣಿನ ಸಂಬಂಧಗಳ ಸಂರಚನೆಯ ಸ್ವರೂಪವನ್ನು ಸಂಸಾರದ ನೆಲೆಯಲ್ಲಿ ನಿರೂಪಿಸಿದ ಹೊಸ ವಿಚಾರಗಳಿಂದಾಗಿ ಆ ಸಂದರ್ಭದಲ್ಲಿ ಅಭಿವ್ಯಕ್ತಿ ಮುಖ್ಯೇನ ಸಮಾಜ ವಿವಿಧ ಸ್ತರದ ಮಹಿಳಾ ಧ್ವನಿಗಳಾಗಿ ಕನ್ನಡ ಸಾಹಿತ್ಯದಲ್ಲಿ ಮೊದಲ ಮಹಿಳಾ ಅಭಿವ್ಯಕ್ತಿಗೆ ಚಾಲನೆ ಸಿಕ್ಕಂತಾಗಿದೆ. ಬಸವಣ್ಣನ ನಾಯಕತ್ವದಲ್ಲಿ ಮೂಡಿಬಂದ ಈ ಅಭಿವ್ಯಕ್ತಿಯು ಮಹಿಳಾ ಸಾಹಿತ್ಯ ಪರಂಪರೆಯಲ್ಲಿಯೆ ಹೊಸ ಮೈಲುಗಲ್ಲನ್ನೇ ನಿರ್ಮಿಸಿದೆ. ವಿವಿಧ ಸಾಮಾಜಿಕ ಹಿನ್ನೆಲೆಯಿಂದ ಬಂದ ಹಾಗೂ ಅಕ್ಷರ ಜ್ಞಾನವೆ ತಿಳಿಯದ ಹೆಣ್ಣು ಮಕ್ಕಳು ವಚನಕಾರ್ತಿಯರಾಗಿ ತಮ್ಮ ವೈಯಕ್ತಿಕ ವಿಚಾರಗಳಿಗೆ ಅಕ್ಷರ ರೂಪ ನೀಡಿದರು. ವಚನಕಾರ್ತಿಯರ ವೈಚಾರಿಕ ಹಾಗೂ ತಾತ್ವಿಕ ಚಿಂತನೆಗಳು ಆಧುನಿಕ ಮಹಿಳಾ ಸಾಹಿತ್ಯ ವಿಚಾರಗಳಿಗೆ ಸರಿಸಾಟಿಯಾಗಿ ಹಲವು ರೀತಿಯಿಂದ ನಮಗೆ ಪ್ರೇರಣೆ ನೀಡಿದೆ. ಸಾಹಿತ್ಯ ಅಭಿವ್ಯಕ್ತಿ ಪುರುಷನಿಗಷ್ಟೇ ಮೀಸಲೆನ್ನುವ ಹಳೆ ಚಿಂತನೆಗಳಿಗೆ ತೆರೆ ಎಳೆದು ಜಾತಿ ಧರ್ಮ ಲಿಂಗಭೇದಗಳ ಗಡಿ ದಾಟಿ ವಿವಿಧ ಸಾಮಾಜಿಕ ಹಿನ್ನೆಲೆಗಳಿಂದ ಬಂದ ಸುಮಾರು 58ಕ್ಕೂ ಹೆಚ್ಚಿನ ವಚನಕಾರ್ತಿಯರು ವಚನಗಳ ರಚನೆಯಲ್ಲಿ ತೊಡಗಿಸಿಕೊಂಡರು. ಶತಮಾನಗಳಿಂದ ಅದುಮಿಟ್ಟ ಹೆಣ್ಣಿನ ಧ್ವನಿಗಳು ಅಭಿವ್ಯಕ್ತಿಗೊಂಡು ತಾರತಮ್ಯಗಳ ಸೂಕ್ಷ್ಮಗಳನ್ನು ಮೊದಲಿಗೆ ತೋರಿಸಿ ವಿನೂತನ ಇತಿಹಾಸವನ್ನೇ ನಿರ್ಮಿಸಿದರು. ಇದರಿಂದ ಹೆಣ್ಣಿಗೆ ಪರಂಪರಾಗತವಾಗಿ ಬಂದ ಅಸಮಾನತೆಗಳು, ಶೋಷಣೆಗಳು, ನೋವುಗಳು ಒಮ್ಮೆಲೆ ಅಕ್ಷರ ರೂಪ ಪಡೆದುಕೊಂಡವು. ಪರಂಪಾಗತವಾಗಿ ಹೆಣ್ಣು ದೂರವಿಟ್ಟಿದ್ದ ಧಾರ್ಮಿಕ ವೈದಿಕ ವಿಧಿಗಳನ್ನು ಆಕೆಗೆ ಎಸಗಿದ ಶೋಷಣೆ, ಅನ್ಯಾಯ, ಮೂಢನಂಬಿಕೆ, ಜಾತಿ, ಢಾಂಬಿಕ ಆಚರಣೆಗಳನ್ನು ಕಡುವಾಗಿ ಟೀಕಿಸುತ್ತಾ ಧಾರ್ಮಿಕ ತತ್ವಗಳ ಅಡಿಯಲ್ಲಿ ತಮ್ಮ ಜೀವನವನ್ನು ನಡೆಸುತ್ತಾ, ವೀರಶೈವ ಧರ್ಮತತ್ವಗಳನ್ನು ಅಭಿವ್ಯಕ್ತಿಪಡಿಸಿದ್ದಾರೆ. ಹೀಗೆ, ವಚನಕಾರ್ತಿಯರು ಮನುವಾದಿ ಸಂಪ್ರದಾಯಗಳಿಗೆ ಪರ್ಯಾಯ ವ್ಯವಸ್ಥೆಯನ್ನು ರೂಪಿಸಿಕೊಳ್ಳುವ ಅವರ ಅಭಿವ್ಯಕ್ತಿಯಿಂದ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೊಸ ಇತಿಹಾಸವೇ ನಿರ್ಮಾಣಗೊಂಡಿತು.

ಶರಣಧರ್ಮದ ಮಹಿಳಾಪರ ಧೋರಣೆಯಿಂದ ಈ ಆಂದೋಲನದಲ್ಲಿ ಮಹಿಳೆಯರಿಗೆ ಸಹಜವಾಗಿಯೇ ಪಾಲುದಾರಿಕೆ ಪ್ರಾತಿನಿಧ್ಯ ದೊರೆಯಿತು. ಸ್ತ್ರೀ–ಪುರುಷ ತಾರತಮ್ಯಗಳನ್ನು ತರತಮವಾಗಿಸಿದ ವೈದಿಕ ತತ್ವ ಚಿಂತನೆಗಳನ್ನು 'ಆತ್ಮ' ತತ್ವದ ನೆಲೆಯ ಸಮಾನತೆಯನ್ನು ಸೂಕ್ಷ್ಮಾತಿಸೂಕ್ಷ್ಮ ಸ್ತರದಲ್ಲಿ ಚಿಂತಿಸಿದರು. ಆತ್ಮತತ್ವದ ಅನನ್ಯತೆ ನಿರೂಪಣೆಯಲ್ಲಿ ಚೈತನ್ಯ ರೂಪದ ಆತ್ಮಸ್ವರೂಪಕ್ಕೆ ಹೊಸ ವ್ಯಾಖ್ಯಾನ ನೀಡಿದರು. ಮಹಿಳಾ ವ್ಯಕ್ತಿತ್ವವನ್ನು ಪರಂಪರೆಯಿಂದ ನಿಷೇಧಿಸಿದ್ದ ಧಾರ್ಮಿಕ ಕ್ಷೇತ್ರದಲ್ಲಿ, ಸ್ತ್ರೀ–ಪುರುಷ ಸಮಾನತೆಯ ನೆಲೆಯಲ್ಲಿ ಆಧ್ಯಾತ್ಮಿಕ ಉನ್ನತಿ ಮರೆದರು. ಈ ಜೀವಾತ್ಮದ ನಿರೂಪಣೆಯ ದಾಸಿಮಯ್ಯ ವಿಚಾರವನ್ನೇ ವಿಸ್ತರಿಸುವ ಗೊಗ್ಗವ್ವೆ ಈ ಭೇದ ನೀತಿಯನ್ನು ಹುಟ್ಟುಹಾಕಿದ ಬುದ್ಧಿಯ ಕಡೆಗೆ ತೋರಿಸಿ ಮಾತಾಡಿದ್ದಾಳೆ.

"ಮೊಲೆ ಮೂಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥ"1

'ಉಭಯದ ಜ್ಞಾನ ಹೆಣ್ಣೋ ಗಂಡೋ' ಎಂದು ಪ್ರಶ್ನಿಸಿದ್ದಾಳೆ. ಈ ಭೇದವೆಸಗಿದ ಜ್ಞಾನ ಮೂಲದಲ್ಲಿಯೇ ದೋಷವಿದೆ ಎನ್ನುವುದು ಆಕೆಯ ಮುಖ್ಯ ವಿಚಾರ. ಯಾವ ಬುದ್ಧಿ ಮೂಲದಲ್ಲಿ ಭೇದಜ್ಞಾನ ಬೆಳೆಯಿತೋ ಆ ಬುದ್ಧಿ ಮೂಲಕ್ಕೆ ಚಿಕಿತ್ಸೆ ಕೊಡದೆ ಬದಲಾವಣೆ ಸಾಧ್ಯವಿಲ್ಲ. ಗೊಗ್ಗವ್ವೆಯ ಇನ್ನೊಂದು ವಚನ ಈ ಲಿಂಗ ತಾರತಮ್ಯ ನೀತಿಯನ್ನೇ ನೀಗಿಕೊಳ್ಳುವ ಮನಸ್ಥಿತಿಗೆ ಸಂಬಂಧಿಸಿದ್ದು.

"ಗಂಡು ಮೋಹಿಸಿ ಹೆಣ್ಣು ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಬೇಕು?
ಈ ಎರಡುರ ಉಭಯವ ಕಳೆದು ಸುಖಿತಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ"2

ಇದು ಪುರುಷ ಪ್ರಧಾನ ವ್ಯವಸ್ಥೆಯ ಯಜಮಾನಿಕೆ ಕುರಿತಾಗಿದೆ. ಹೆಣ್ಣಿನ್ನು ವಸ್ತುರೂಪದಲ್ಲಿ ಅವಳು ಪುರುಷನ ಸ್ವತ್ತಾಗಿ ಒಡೆತನ ಸಾಧಿಸಿಕೊಂಡ ಸಾಂಸ್ಕೃತಿಕ ಯಜಮಾನಿಕೆಯನ್ನು ಪ್ರಶ್ನಸಿದ್ದಾಳೆ. ಪರಂಪರಾಗತವಾಗಿ ಮೂಡಿಬಂದ ಮಹಿಳೆಯರ ನಕಾರಾತ್ಮಕ ಚರಿತ್ರೆಯನ್ನು ವಚನಕಾರ್ತಿಯರು ಬಯಲಿಗೆಳೆದರು. ಮುಕ್ತವೇದಿಕೆಯಾಗಿದ್ದ ಅನುಭವ ಮಂಟಪದಲ್ಲಿ ಸ್ತ್ರೀಯರು, ಪುರುಷ ವಚನಕಾರರ ಸಂಖ್ಯೆಯಲ್ಲಿ ಮತ್ತು ತಾತ್ವಿಕ ಎತ್ತರದಲ್ಲಿ ಸರಿಸಮವಾಗಿ ಬೆಳೆದರು. ಎಚ್ಚರದಿಂದ ಮತ್ತು ಅಷ್ಟೇ ಸೈದ್ಧಾಂತಿಕ ಬದ್ಧತೆಯಿಂದ ಈ ವೇದಿಕೆಯಲ್ಲಿ ಸ್ತ್ರೀಯರು ಜಾತಿ ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಮಾತನಾಡಿದರು. ದೇಹವೇ ದೇಗುಲವಾಗಿ ಹೆಣ್ಣಿನ ದೇವಾಲಯ ಪ್ರವೇಶ, ಆತ್ಮಕ್ಕೆ ತಾರಮ್ಯವಿಲ್ಲದ ಧಾರ್ಮಿಕ, ಆಧ್ಯಾತ್ಮಕ ಸಮಾನತೆ ವಿಚಾರಗಳನ್ನು ಮಹಿಳಾಪರಗೊಳಿಸಿದರು.
ಹೆಣ್ಣಿನ ಲೈಂಗಿಕ ಮಡಿವಂತಿಕೆಯನ್ನು ಕಳಚಿ ಅದರ ಸ್ವತಂತ್ರವನ್ನು ಎತ್ತಿಹಿಡಿಯುವ 'ಎಲ್ಲ ಗಂಡಂದಿರು ಗಜವೇಂಟೆಕಾರರು, ಎನ್ನ ಗಂಡ ಮನವೇಂಟೆಕಾರ' ಎನ್ನುವ ಕದಿರರೆಮ್ಮವ್ವೆಯ ಈ ಮಾತು ಪರಂಪರೆಯ ಪುರಷ ಕೇಂದ್ರಿತ ಲೈಂಗಿಕ ಒಡೆತನವನ್ನು ತಡೆದು ನಿಲ್ಲಿಸಿವ ಲೈಂಗಿಕ ಅಧೀನತೆಯನ್ನು ಧಿಕ್ಕರಿಸಿದ್ದಾಳೆ. ಕಸಿದುಕೊಂಡ ಲೈಂಗಿಕ ಅಧಿಕಾರವನ್ನು ಪಡೆಯುವ ಹಕ್ಕನ್ನು ಕದಿರರೆಮ್ಮವ್ವನ ಈ ವಚನದಲ್ಲಿ ಇನ್ನಷ್ಟು ಸ್ಪಷ್ಟವಾಗಿ ಪ್ರತಿಪಾದಿನೆ ಸಿಗುತ್ತದೆ.

"ಎಲ್ಲರ ಹೆಂಡಿರು ತೊಳಸಿಕ್ಕುವರು;
ಎನ್ನ ಗಂಡಂಗೆ ತೊಳಸುವುದಿಲ್ಲ.
ಎಲ್ಲರ ಗಂಡಂದಿರಿಗೆ ಬಸಿವರು;
ಎನ್ನ ಗಂಡಂಗೆ ಬಸಿವುದಿಲ್ಲ,
ಎನ್ನರ ಗಂಡಂಸಿರಿಗೆ ಬೀಜವುಂಟು;
ಎನ್ನ ಗಂಡಂಗೆ ಅಂಡದ ಬೀಜವಿಲ್ಲ
ಎಲ್ಲರ ಗಂಡಂದಿರು ಮೇಲೆ,
ಎನ್ನ ಗಂಡ ಕಳಗೆ, ನಾ ಮೇಲೆ,
ಕದಿರೆಮ್ಮೆಯೊಡೆಯ ಗುಹೇಶ್ವರಾ."3

ಪರಂಪರಾಗತಗೊಳಿಸಿದ ಲಿಂಗ ಅಸಮಾನತೆಯನ್ನು ಕುಟುಂಬ ವ್ಯವಸ್ಥೆಯಲ್ಲಿನ ಆಸ್ತಿ ಅಧಿಕಾರ ಸಂಬಂಧಗಳು, ಸಮಾಜ ವ್ಯವಸ್ಥೆಯಲ್ಲಿನ ಮೂಢ ನಿಲುವುಗಳು, ಧಾರ್ಮಿಕ ನಂಬಿಕೆಗಳು ಹೀಗೆ ಎಲ್ಲಾ ನೆಲೆಗಳನ್ನು ಪ್ರಸ್ತಾಪಿಸುವ ವಚನಕಾರ್ತಿಯರ ಕ್ರಾಂತಿಕಾರಿ ನಿಲುವಿನಲ್ಲಿ ಸ್ತ್ರೀ ಸಮಾನತೆಯ ಪ್ರತಿಪಾದಿಸಿನೆಯಿದೆ. ಪುರುಷಾಧೀನವನ್ನು ಸಹಿಸದ ವಚನಕಾರರು ಜಾತಿ ಕಾರಣದಿಂದ ಅನುಭವಿಸಿದ ಅವಮಾನ ತಿರಸ್ಕಾರಗಳ ವಿರುದ್ಧವೂ ತಿರುಗಿಬಿದ್ದಿದ್ದಾರೆ. ಜಾತಿವ್ಯವಸ್ಥೆಯನ್ನು ಕುರಿತು ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಯ ಈ ವಚನ,

"ಕುರಿಕೋಳಿ ತಿರಿಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂಬರು.
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು.
ಅವರೆಂತು ಕೀಳುಜಾತಿಯಾದರು? ಜಾತಿಗಳು ನೀವೇಕೆ ಕೀಳಾಗಿರೊ?
ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು.
ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಂಗೆಶೋಭಿತವಾಯಿತು.
ಅದೆಂತೆಂದಡೆ : ಸಿದ್ಧಲಿಕೆಯಾಯಿತು, ಸುಗ್ಗಳೆಯಾಯಿತು.
ಸಿದ್ಧಲಿಕೆಯ ತುಪ್ಪವನು, ಸಗ್ಗಳೆಯ ನೀರನು
ಶುದ್ಧವೆಂದು ಕುಡಿವ ಬುದ್ಧಿಗೇಡಿ ವಿಪ್ರರಿಗೆ ನಾಯಕನರಕ ತಪ್ಪದಯ್ಯಾ.
ಉರಿಲಿಂಗಪೆದ್ದಿಗಳರಸ ಒಲ್ಲನವ್ವಾ."4

ಮೇಲ್ಜಾತಿಗಳಿಂದ ತನ್ನ ಜನರಿಗಾದ ಅನ್ಯಾವನ್ನು ಪ್ರತಿಭಟಿಸುವ ನೇರವಾದ ನುಡಿಗಳು ಜಾತಿವ್ಯವಸ್ಥೆಯ ವಿರುದ್ಧ ಕಿಡಿಗಳಾಗಿ ಬೆಂಕಿ ಉಂಡೆಗಳಂತಿವೆ.
ಹೀಗೆ, ಪರಂಪರಾಗತ ವ್ಯವಸ್ಥೆಯಲಿನ ಜಾತಿ ಪದ್ಧತಿ ಮತ್ತು ಸ್ತ್ರೀ ಭೇದಭಾವಗಳಿಗೆ ಸಂಬಂಧಿಸಿದ ಈ ಎರಡು ಅಸಮಾನ ನೆಲೆಗಳನ್ನು ಅಂದಿನ ವಚನಕಾರ್ತಿಯರು ಪ್ರಶ್ನಿಸಿದರು. ವಚನಕಾರ್ತಿಯರು ಶರಣ ಆಂದೋಲನ ರೂಪಿಸಲು ಯತ್ನಿಸಿದ ಸಾಮಾಜಿಕ ಮತ್ತು ಧಾರ್ಮಿಕ ಸಂರಚನೆಗೆ ತಾವೂ ಸಹ ಸಮಾನರಾಗಿ ಕೈಜೋಡಿಸಿರು. ಸಮಾಜದ ನಾನಾ ಜಾತಿಗಳಿಂದ ಬಂದ ಸ್ತ್ರೀಯರು ದೀಕ್ಷೆ ಪಡೆದು, ತಮ್ಮೊಳಗಿನ ಆಧ್ಯಾತ್ಮಿಕ ತುಡಿತಗಳನ್ನು ಅಳುಕಿಲ್ಲದೆ ಆಚರಿಸಿ, ವಚನಗಳ ರೂಪದಲ್ಲಿ ಅಭಿವ್ಯಕ್ತಿ ನೀಡಿದರು. ವಚನಕಾರರ ಕಾಲದಲ್ಲಿನ ಈ ಪ್ರಗತಿ ಅವರ ಬಹು ಪ್ರಮುಖ ಸಾಧನೆಯ ಪ್ರತೀಕವಾಗಿದೆ. ಜಾತಿ, ವರ್ಗ, ವೃತ್ತಿಗಳ ಮತ್ತು ಲಿಂಗಾಧರಿತವಾದ ಅನೇಕ ದಿಗ್ಬಂಧನಗಳಿಂದ ಬಹುಮಟ್ಟಿಗೆ ಮಹಿಳೆಯರು ಬಿಡುಗಡೆ ಪಡೆದಳು. ಅಕ್ಷರ ಕಲಿತು ಸ್ವಾನುಭವಕ್ಕೆ ವಚನರೂಪ ನೀಡಿದಳು. ಹೀಗೆ ಸಾಮೂಹಿಕವಾಗಿ ಮಹಿಳೆಯರು ಗಣನೀಯ ಪ್ರಮಾಣದಲ್ಲಿ ಕಂಡು ಬರುವುದು ವಚನಯುಗದಲ್ಲಿಯೆ ಎಂದರೆ ತಪ್ಪಾಗದು. ಪುರಷರನ್ನು ಅವಲಂಬಿಸಿಯೇ ಬದುಕಬೇಕಾಗಿದ್ದ ಮಹಿಳೆಯರು ಶಿವಭಕ್ತೆರಾಗಿ ಪತ್ನಿಯೊಂದಿಗೆ ಸಾಂಸಾರಿಕ ಬದುಕಿನ ಮೂಲಕವೂ ಮೋಕ್ಷಸಾಧನೆ ಮಾಡುವ ಅವಕಾಶವಿತ್ತು. ಆದ ಕಾರಣ ಪಾರಮಾರ್ಥಿಕ ಮತ್ತು ಧಾರ್ಮಿಕ ನೆಲೆಗಳಲ್ಲಿ ಮಹಿಳೆಯರ ಬದುಕಿನಲ್ಲಿ ಈ ಅವಕಾಶಗಳು ಹೆಚ್ಚಾಗಿಯೇ ದೊರೆಯಿತು. ಕೆಲವರು 'ತತ್ವದ ಮಾತು ನಮಗೇತಕಯ್ಯ' ಎಂದು ಆಚಾರ ಶುದ್ಧಿಯಲ್ಲಿ ಬದುಕಿದರು. ವೃತ್ತಿ ಅವಲಂಬಿತ ಜಾತಿ ನಿರ್ಣಯದ ಸಂಕುಚ ಮನೋಭಾವದಿಂದ ಹೊರಬಂದು 'ಆವ ಕಾಯಕವ ಮಾಡಿದರೂ ಒಂದೆ ಕಾಯಕವಯ್ಯ' ಎಂದು ಕಾಯಕತತ್ವದ ಸತ್ಯಶುದ್ಧತೆಯನ್ನು

ಎತ್ತಿಹಿಡಿದರು.

ಕೇವಲ ಐದು ವಚನಗಳು ಸಿಕ್ಕಿರುವ 'ಬಿಡಾಡಿ' ಅಂಕಿತದ ಬೊಂತಾದೇವಿ ಅಥವಾ ನಿಜದೇವಿಯೂ ಅಕ್ಕನಂತೆ ಬಾಲ್ಯದಲ್ಲಿಯೇ ಶಿವಭಕ್ತಳಾಗಿ ಕಾಶ್ಮೀರದಿಂದ ದಿಗಂಬರೆಯಾಗಿ ಕಲ್ಯಾಣಕ್ಕೆ ಬಂದಳು. ಈಕೆಯ ಬಗ್ಗೆ ಹೆಚ್ಚಿನ ವಿಚಾರಗಳು ತಿಳಿಯದಿದ್ದರೂ ಅಕ್ಕನಂತೆ ತೀವ್ರ ವೈರಾಗಿಯಾಗಿದ್ದಳು. ಹೀಗೆ, ಲೌಕಿಕ ವ್ಯಾಪಾರಗಳಿಂದ ವಿಮೋಚನೆಯನ್ನು ಪಡೆದು ಸಂಪೂರ್ಣವಾಗಿ ಆಧ್ಯಾತ್ಮದ ಅನುಭವನ್ನು ಪಡೆದರು. ಅಂತೆಯೇ ಗೊಗ್ಗವೆಯೂ ಇದೇ ಸಾಲಿಗೆ ಸೇರುತ್ತಾಳೆ. ಒಟ್ಟು ವಚನಕಾರ್ತಿಯರನ್ನು ನಾಲ್ಕು ರೀತಿಯಲ್ಲಿ ಕಾಣುತ್ತಾರೆ. ಶರಣಸತಿರಾಗಿ ಲಿಂಗಪತಿಯ ಲಿಂಗಸಾಮರಸ್ಯದ ಸುಖವನ್ನು ಪಡೆದು ಅಲೌಕಿಕ ಆನಂದವನ್ನು ಪಡೆದು ವೈರಾಗಿಗಳೆನಿಸಿದರು. ಇವರಲ್ಲಿ ಮೊದಲ ಸ್ಥಾನ ಅಕ್ಕಮಹಾದೇವಿದಾದರೆ ಆನಂತರ ನಿಜದೇವಿ, ಗೊಗ್ಗವ್ವೆ ಮೊದಲಾದವರು.

'ಪತಿಯಾಜ್ಞೆಯಲ್ಲಿ ಚರಿಸುವ ಸತಿಗ್ಯಾಕೆ ಪ್ರತಿಜ್ಞೆಯಂತೆ; ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ' ಎನ್ನುವ ಗಂಗಾಂಬಿಕೆ, 'ಕೂಟಕ್ಕೆ ಸತಿಪತಿಯೆಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ" ಎನ್ನವ ಆಯ್ದಕ್ಕಿ ಲಕ್ಕಮ್ಮ, 'ಪುರುಷನ ಆಚಾರದಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವತಂತ್ರವುಂಟೆ' ಎನ್ನುವ ಅಕ್ಕಮ್ಮ ಹಾಗೂ ಇತರರ ನಿರ್ವಚನದಲ್ಲಿ ಸಂಪ್ರದಾಯಿಕ ದಾಂಪತ್ಯ ಧರ್ಮವನ್ನು ಒಪ್ಪಿಕೊಳ್ಳುವ ಸಂಸಾರಿಕ ಜೀವನವನ್ನು ನಡೆಸುವ ಇಂಗಿತವಿದೆ. 'ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವನಿಗೆ' ಎಂದು ಪರಮಾರ್ಥಿಕ ದರ್ಶನ ಪಡೆಯಲು ಸಂಸಾರಿಕ ಜೀವನ ಅಡ್ಡಿಯಲ್ಲವೆಂದು ತಾತ್ವಿಕ ದಾಂಪತ್ಯದ ನೆಲೆಯಲ್ಲಿ ಆಧ್ಯಾತ್ಮಿಕವಾದ ಸಹಜೀವನ ಹಲವು ಶರಣೆಯರು ನಡೆಸಿದರು. ಬಹುತೇರು ಶರಣೆಯರು ಇದೇ ಮಾದರಿಯಲ್ಲಿ ತಮ್ಮ ಬದುಕನ್ನು ನಂಬಿಕೊಂಡಿದ್ದರು.

'ತತ್ವದ ಮಾತು ನಮಗೇಕಯ್ಯ' (ದುಗ್ಗಳೆ) ಎನ್ನುತ್ತಾ ಶರಣ ಆಂದೋಲದಲ್ಲಿ ಭಾಗಿಗಳಾಗಿ ಆಚಾರಶುದ್ಧರಾಗಿ ಕೆಲವು ಶರಣೆಯರು ಬದುಕಿದರು.

ಧಾರ್ಮಿಕ ವಿಚಾಗಳಿಗಿಂತ ಸಾಮಾಜಿಕ ಸಂಗತಿಗಳನ್ನು ಪ್ರಸ್ತಾಪಿಸುವ ವಚನಕಾರ್ತಿಯರು ಆಸಕ್ತಿಯಿಂದಲೇ ಕೆಲವರು ಸಮಾಜ ಸುಧಾರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸಮಾಜದ ವಿಷಮತೆಯನ್ನು ನೇರವಾಗಿ ಪ್ರಶ್ನಿಸುವಂತೆ ವೈಯಕ್ತಿಕವಾಗಿ ಆಚರಿಸಿ ತೋರಿಸಿದರು. ತಮಗೆ ಸಿಕ್ಕ ಅಭಿವ್ಯಕ್ತಿ ಸ್ವಾತಂತ್ರವನ್ನು ಪಡೆದು ಮುಕ್ತವಾಗಿ ಮಾತಾಡಿದರು ಅಲ್ಲದೆ, ಕ್ರಿಯಾತ್ಮಕವಾಗಿ ಅಂದಿನ ಆಂದೋಲನದ ಭಾಗವಾದರು.

**ಆಧಾರ ಗ್ರಂಥಗಳು**


1. ಡಾ. ವೀರಣ್ಣ ರಾಜೂರ (ಸಂ), ಶಿವಶರಣೆಯ ವಚನಸಂಪಟ, ವಚನ-779, ಪುಟ-247.
2. ಅದೇ, ವಚನ-779, ಪುಟ-246.
3. ಅದೇ, ವಚನ-746, ಪುಟ-231.
4. ಅದೇ, ವಚನ-733, ಪುಟ-225.